ಪ್ರವಾಸ

# ಲ ಸಗ್ರಾದ ಫೆಮಿಲಿಯ

## ನೋಡಿರೊಮ್ಮೆ, ಬಾರ್ಸಿಲೋನಾದ ಹೆಮ್ಮೆ



ನೀರಿನ ಕನ್ನಡಿಯಲ್ಲಿ ಅದ್ಭುತ ವಾಸ್ತುಶಿಲ್ಪ

**ಸ್ಪೇನ್‌ನ 'ಲ ಸಗ್ರಾದ ಫೆಮಿಲಿಯ' ಜಗತ್ಪ್ರಸಿದ್ಧ ವಾಸ್ತುಶಿಲ್ಪಗಳಲ್ಲೊಂದು. ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಗಳಲ್ಲೊಂದಾದ ಈ ನಿರ್ಮಾಣ, ಸುಮಾರು ನೂರಿಪ್ಪತ್ತೈದು ವರ್ಷಗಳಿಂದ ನಡೆಯುತ್ತಲೇ ಇದೆ. ಈ ಅಪೂರ್ವ ವಾಸ್ತುಶಿಲ್ಪ ತನ್ನ ಅತ್ಯದ್ಭುತ ವಿನ್ಯಾಸ, ಸೌಂದರ್ಯ ಹಾಗೂ ಗಾಂಭೀರ್ಯದಿಂದ ನೋಡುಗರ ಮನಸೆಳೆಯುತ್ತದೆ.**

■ ಮಮತಾ ಪ್ರಭು

ಚಿತ್ರಗಳು: ಪ್ರಭು ಓ.

ಯುರೋಪ್ ಖಂಡದ, ಸ್ಪೇನ್ ದೇಶದ ಆಕರ್ಷಣೆಗಳಲ್ಲಿ ಬಾರ್ಸಿಲೋನ ನಗರ ಮುಖ್ಯವಾದುದು. ಬಾರ್ಸಿಲೋನದ ಆಕರ್ಷಣೆಯ ಕೇಂದ್ರ ಅಲ್ಲಿನ ಅತ್ಯಂತ ಅದ್ಭುತವಾದ ಕಟ್ಟಡ 'ಲ ಸಗ್ರಾದ ಫೆಮಿಲಿಯ' (**La Sagrada Familia**). ಇದು ಪ್ರವಾಸಿಗರನ್ನು ತನ್ನತ್ತ ಸೆಳೆಯುವ ಚುಂಬಕಸ್ಥಳ.

ಜಗತ್ಪ್ರಸಿದ್ಧ ವಾಸ್ತುಶಿಲ್ಪಿ ಆ್ಯಂಟೋನಿ ಗಾವುಡಿ 'ಲ ಸಗ್ರಾದ ಫೆಮಿಲಿಯ' ಕರ್ತೃ. ಈ ಚಾರಿತ್ರಿಕ ನಿರ್ಮಾಣದ ಆರಂಭವಾದದ್ದು 1882ರಲ್ಲಿ. ಆದರೆ ಈಗಲೂ ಕಟ್ಟಡ ಸಂಪೂರ್ಣವಾಗಿಲ್ಲ. ಕಟ್ಟಡದ ಕೆಲಸವನ್ನು 2026ರಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಆಂಟೋನಿ ಗಾವುಡಿ ತೀರಿಕೊಂಡಿದ್ದು 1926ರಲ್ಲಿ. ಆವೇಳೆಗೆ ಕಟ್ಟಡದ ಶೇ. 25ರ ನಿರ್ಮಾಣ ಮಾತ್ರ ಪೂರ್ಣಗೊಂಡಿತ್ತು. ಆನಂತರ ಅನೇಕ ವಾಸ್ತುಶಿಲ್ಪಿಗಳು ಕೆಲಸ ಮುಂದುವರಿಸಿದ್ದಾರೆ. ಈ ಕಟ್ಟಡವು ಯುದ್ಧ ಕಾಲಗಳಲ್ಲಿ ಅಡೆತಡೆಗಳನ್ನು ಅನುಭವಿಸಿದೆ.



'ಲ ಸಗ್ರಾದ ಫೆಮಿಲಿಯ' ವಾಸ್ತುಶಿಲ್ಪಿ ಆ್ಯಂಟೋನಿ ಗಾವುಡಿ

ದಾಳಿಗೆ, ಬೆಂಕಿಯ ಝಳಕ್ಕೆ ತುತ್ತಾಗಿದೆ. ಆದರೂ ಸದೃಢವಾಗಿ, ಎತ್ತರವಾಗಿ, ಸುಂದರವಾಗಿ ರೂಪುಗೊಳ್ಳುತ್ತಲೇ ಇದೆ.

'ಲ ಸಗ್ರಾದ ಫೆಮಿಲಿಯ' ಅನ್ನು ಆರಂಭದಲ್ಲಿ ಕ್ಯಾಥೆಡ್ರಲ್ (ಆರ್ಚ್ ಬಿಷಪ್ ಅವರು ವಾಸ ಮಾಡುವ ಸ್ಥಳ) ಎಂದು ಹೇಳಲಾಗುತ್ತಿತ್ತು. ಇತ್ತೀಚೆಗೆ ಪೋಪ್‌ರವರು ಇದನ್ನು 'ಬೆಸಿಲಿಕ' (ಪೋಪ್‌ರಿಂದ ಮಾನ್ಯತೆಗೊಂಡಿರುವ ಚರ್ಚ್) ಎಂದು ಘೋಷಿಸಿದ್ದಾರೆ.

ಈ ಬೆಸಿಲಿಕವನ್ನು 18 ಮುಖ್ಯ ಕಂಬಗಳ